ಉಂಟು. ಅದು ಎಂಥಾ ವೇಗದಲ್ಲಿ ಪ್ರಸಾರ ಪಡೆಯುತ್ತದೆಂದರೆ ಮೂಲ ವ್ಯಕ್ತಿಗೆ ತಾನು ಇದನ್ನು ಯಾವ ವಿಷಯದ ಬಗ್ಗೆ ಹೇಳಿದೆ ಎಂದು ಗೊಂದಲ ಉಂಟಾಗುವಷ್ಟು ಇದು ಬಳಕೆಯಾಗಿ ಕಲಸಿಹೋಗಿರುತ್ತದೆ!

ಹಾಗಂತ ಸಾಮಾಜಿಕ ಜಾಲತಾಣಗಳಿಂದ ಬರೀ ಹಾನಿ ಮಾತ್ರ ಸಾಧ್ಯವೇ ಎಂದು ಯೋಚಿಸಿದರೆ, ಅದೂ ಪೂರ್ಣ ಸತ್ಯವಲ್ಲ. ಮಳೆ, ಪ್ರವಾಹ ಇಂತಹ ಸನ್ನಿವೇಶಗಳಲ್ಲಿ ಜನಗಳ ಬಗ್ಗೆ ಸುದ್ದಿ ತಲುಪಿಸಲು, ಅಭಿಪ್ರಾಯಗಳನ್ನು ಕ್ರೋಢೀಕರಿಸಲು, ಸಾಮಾಜಿಕ ಆಸಕ್ತಿಯ ವಿಷಯಗಳನ್ನು ಹಂಚಿಕೊಳ್ಳಲು ಮಾಧ್ಯಮಗಳಿಂತ ಹೆಚ್ಚು ಅವಕಾಶ ಇದೆ. ಆದರೆ ಇದೆಲ್ಲವೂ 'ಡೇಟಾ' ಆಗಿ ಪರಿವರ್ತನೆಗೊಂಡು ಮತ್ತ್ಯಾವುದೋ ಉದ್ದೇಶಕ್ಕೆ ಬಳಕೆ ಆಗುತ್ತದೆ ಎನ್ನುವ ಅಪಾಯದ ಸೂಚನೆಯನ್ನು ತಜ್ಞರು ಕೊಡುತ್ತಲೇ ಇದ್ದಾರೆ. ಆದರೂ ನಮ್ಮ ಮಾಹಿತಿ ಗಣಿಗಾರಿಕೆ ಜಗ್ಗದೆ ಕುಗ್ಗದೆ ಮುಂದುವರೆದಿದೆ.

ಮುಂಜಾನೆ ಎದ್ದ ತಕ್ಷಣ ಮೊಬೈಲಿಗೆ ಮೊದಲು ಕಣ್ಣು ತೋರಿಸುವಂತಾಗಿರುವ ನಾವು ''ಕರಾಗ್ರೇ ವಸತೇ ಲಕ್ಷ್ಮೀ... ಕರ ಮಧ್ಯೆ ಸರಸ್ವತಿ...'' ಎನ್ನುವುದನ್ನು ಅಕ್ಷರಶಃ ನಿಜ ಮಾಡಿದ್ದೇವೆ. ಅದು ಜುಕರ್‌ಬರ್ಗನಿಗೆ ಮಾತ್ರ! ಇಲ್ಲಿ ನಾವು ಎದ್ದು ಫೇಸ್‌ಬುಕ್ ದರ್ಶನ ಮಾಡಿದಾಗಲೆಲ್ಲಾ ಅಲ್ಲಿ ಅವನ ಹುಂಡಿಗೆ ಝುಣ ಝುಣ ಕಾಂಚಾಣ ಬೀಳುತ್ತಲೇ ಹೋಗುತ್ತದೆ.

ಈಗಲ್ಸ್ ಎನ್ನುವ ಇಂಗ್ಲಿಷ್ ಬ್ಯಾಂಡೊಂದು ಹೋಟೆಲ್ ಕ್ಯಾಲಿಫೋರ್ನಿಯಾ ಎನ್ನುವ ಹಾಡನ್ನು ಎಪ್ಪತ್ತರ ದಶಕದಲ್ಲಿ ರಿಲೀಸ್ ಮಾಡಿತ್ತು. ಆ ಹಾಡು ಅಮೆರಿಕದ ಸ್ಟ್ಯಾಚ್ಯೂ ಆಫ್ ಲಿಬರ್ಟಿಯನ್ನು, ಹೊಸ ಅಮೆರಿಕದ ಕನಸುಗಳನ್ನು, ವೈರುಧ್ಯಗಳನ್ನು ಕೇಂದ್ರವಾಗಿಟ್ಟುಕೊಂಡು ಬರೆದಂಥದ್ದು. ಅಭೂತಪೂರ್ವ ಯಶಸ್ಸು ಕಂಡ ಹಾಡದು.

ಅದರಲ್ಲಿ ಒಂದು ಸಾಲು ಹೀಗಿದೆ: "ಯು ಕ್ಯಾನ್ ಚೆಕ್ ಔಟ್ ಎನಿ ಟೈಮ್ ಯು ಲೈಕ್... ಬಟ್ ಯು ಕ್ಯಾನ್ ನೆವರ್ ಲೀವ್..."

ಅಂದರೆ ನೀವು ಇಲ್ಲಿಂದ ಯಾವಾಗ ಬೇಕಾದರೂ ಹೊರಡಬಹುದು, ಆದರೆ ಬಿಡುಗಡೆ ಮಾತ್ರ ಎಂದಿಗೂ ಸಾಧ್ಯವಿಲ್ಲ ಎನ್ನುವುದು ಅದರ ಭಾವಾರ್ಥ. ಸಾಮಾಜಿಕ ಜಾಲತಾಣ ಮತ್ತೆ ಅಲ್ಲಿ ಹರಿಯಬಿಡುವ ನಮ್ಮ ಭಾವನೆಗಳು, ಮಾತುಗಳು, ಉದ್ವೇಗಭರಿತ ಅಭಿಪ್ರಾಯಗಳು, ತೂಗಿ ಬರೆಯುವ ಲೇಖನಗಳು ಎಲ್ಲವೂ ಆಕಾಶಗಂಗೆಯನ್ನೂ ದಾಟಿ ಎತ್ತಲೋ ಹೊರಟಿದೆ ಅನ್ನುವ ಅತ್ಯಂತ ಅಪ್ಯಾಯಮಾನ ಭ್ರಮೆ ನಮಗೆ. ಇದೊಂದು ಪದ್ಮಪತ್ರ. ಅದು ಅರಿವಾಗುವ ಹೊತ್ತಿಗೆ ಇನ್ನೊಂದು ಹೊಸ ಭ್ರಮೆ ಸೃಷ್ಟಿ ಆಗಿರುತ್ತದೆ.


## ಪ್ರೀತಿ ನಾಗರಾಜ

ಒಂದು ಕೈಯಲ್ಲಿ ಕನ್ನಡದಲ್ಲೂ ಇನ್ನೊಂದು ಕೈಯಲ್ಲಿ ಇಂಗ್ಲಿಷ್‌ನಲ್ಲೂ ಬರೆಯುವ ಪ್ರೀತಿ ನಾಗರಾಜ ವೃತ್ತಿಯಿಂದ ಪತ್ರಕರ್ತೆ. ದಾವಣಗೆರೆಯವರು, ಪ್ರಸ್ತುತ ಮೈಸೂರಿನ ನಿವಾಸಿ. ಪತ್ರಿಕೋದ್ಯಮ, ಮನಃಶಾಸ್ತ್ರಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು, 'ಡೆಕ್ಕನ್ ಹೆರಾಲ್ಡ್', 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಗಳಲ್ಲಿ, 'ಸಿಎನ್‌ಬಿಸಿ' ಟೀವಿ ಚಾನೆಲ್‌ನಲ್ಲಿ ಕೆಲಸ ಮಾಡಿರುವ ಅನುಭವಿ. ರಂಗಭೂಮಿ ಮತ್ತು ಸಿನಿಮಾರಂಗದ ಪ್ರಸಿದ್ಧ ಅಭಿನೇತ್ರಿ ಬಿ. ಜಯಶ್ರೀ ಅವರ ಆತ್ಮಕತೆ 'ಕಣ್ಣಾ ಮುಚ್ಚೇ... ಕಾಡೇ ಗೂಡೇ...'ಯ ನಿರೂಪಕಿ. 'ಪ್ರಜಾವಾಣಿ' ಪತ್ರಿಕೆಯ 'ಕಾಮನಬಿಲ್ಲು' ಪುರವಣಿಯಲ್ಲಿ ಪ್ರಕಟಗೊಂಡ 'ಮಿರ್ಚಿ ಮಂಡಕ್ಕಿ' ಅಂಕಣ, ಅದೇ ಹೆಸರಿನಲ್ಲಿ ಪುಸ್ತಕರೂಪದಲ್ಲಿ ಪ್ರಕಟಗೊಂಡಿದೆ.